ಶ್ರೀ ಭವಾನಿ ಶಂಕರ ದೇವಸ್ಥಾನ, ನಿಲುವಾಗಿಲು.

ಚಿಕ್ಕಮಗಳೂರು ಜಿಲ್ಲಾ ಕೊಪ್ಪಾ ತಾಲ್ಲೂಕಿನಲ್ಲಿರುವ ನಿಲುವಾಗಿಲು ಗ್ರಾಮದಲ್ಲಿ ಈ ದೇವಸ್ಥಾನವಿದೆ. ಇದರಲ್ಲಿ ಭವಾನಿ ಶಂಕರೇಶ್ವರ, ವರದ ದುರ್ಗಾಂಬ, ಬಾಲಗಣಪತಿ, ಬಾಲಸುಬ್ರಹ್ಮಣ್ಯ, ನಂದಿಕೇಶ್ವರ ದೇವರುಗಳು ಇದೆ.

ಇಲ್ಲಿರುವ ಭವಾನಿ ಶಂಕರೇಶ್ವರ, ಉದ್ಭವ ಲಿಂಗ. ಈ ಸ್ವಯಂಭೂ ಲಿಂಗದ ಪೂರ್ವ ಇತಿಹಾಸದ ಬಗ್ಗೆ ತಿಳಿದಿಲ್ಲ. ನೂರಾರು ವರ್ಷಗಳಗೆ ಮೊದಲು ಇಲ್ಲಿ ಈ ಉದ್ಭವ ಲಿಂಗವೊಂದೇ ಇತ್ತು. ಸುತ್ತುಮುತ್ತಲೂ ಕಾಡಿನ್ ಪ್ರದೇಶವಾಗಿತ್ತು. ಇಲ್ಲಿಗೆ ಸುಮಾರು ಒಂದು ಕಿ.ಮಿ. ದೂರದಲಿ ್ಲರುವ ಬಿಕ್ಕಳಿಯಲ್ಲಿ ಭತ್ತದ ಗದ್ದೆ, ಅಡಕೆ ತೋಟಗಳಿದ್ದು ಅಲ್ಲಿ ಗೌಡರುಗಳು ವ್ಯವಸಾಯ ಮಾಡುತ್ತಿದ್ದರು.

ಒಂದುಕಾಲದಲ್ಲಿ ಚಿಕ್ಕಳಿಯಲ್ಲಿ ಒಬ್ಬಗೌಡನು ವಾಸುವಾಗಿದ್ದನಂತೆ. ಅವನ ಮನೆಯಲ್ಲಿ ಒಂದು ಹಸುವು ಪ್ರತಿದಿನ ಸರಿಯಾಗಿ ಹಾಲು ಕರೆಯುತ್ತಿರಲಿಲ್ಲವಂತೆ. ಕಾರಣವನ್ನು ತಿಳಿಯಲು ಗೌಡನು ಹಸುವಿನ ಹಿಂದೆ ಹೋಗಿ ನೋಡಿದಾಗ ಆ ಹಸುವು ಈ ಉದ್ಭವ ಲಿಂಗದ ಮೇಲೆ ಹಾಲು ಕರೆಯುತ್ತಿತ್ತಂತೆ. ಗೌಡನಿಗೆ ಸಿಟ್ಟು ಬಂದು ಕೈಯಲ್ಲಿದ್ದ ಮಚ್ಚುಗತ್ತಿಯನ್ನು ಹಸುವಿನೆಡೆಗೆ ಬೀಸಿದನಂತೆ. ಕತ್ತಿಯ ಗುರಿತಪ್ಪಿ ಲಿಂಗಕ್ಕೆ ತಗುಲಿ ಲಿಂಗವು ಮಧ್ಯದಲ್ಲಿ ಬಿರುಕು ಬಿಟ್ಟಿತಂತೆ. ಇದನ್ನು ನೋಡಿ ಗೌಡನು ಹೆದರಿ ಇಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ಪೂಜೆಗೆ ಏ ರ್ಪಡಿಸಿದನಂತೆ. ಲಿಂಗದ ಮಧ್ಯದಲ್ಲಿ ಕತ್ತಿಯ ಏಟಿನಿಂದಾದ ಬಿರುಕನ್ನು ಈಗಲು ನೋದಬಹುದು.

ಒಮ್ಮೆ ಈ ದೇವಸ್ಥಾನದ ಆಸು ಪಾಸಿನಲ್ಲಿ ಯಾವುದೋ ಅನಾಚಾರ ನಡೆಯಿತಂತೆ. ಮಾರನೆಯ ದಿನದಿಂದ ಪ್ರತಿದಿನ ಪೂಜೆಯ ವೇಳಿಗೆ ಒಂದು ನಾಗರ ಹಾವು ಕಾಣಿಸಿಕೊಂಡು ಯಾರನ್ನು ದೇವರ ಹತ್ತಿರ ಬರಲು ಬಿಡುತ್ತಿರಲಿಲ್ಲವಂತೆ. ಆದ್ದರಿಂದ ಕೆಲವು ದಿನ ಪೂಜೆಯೂ ನಿಂತುಹೋಗಿತ್ತಂತೆ. ಆಮೇಲೆ ಕೆಲವು ಹೋಮಹವನಗಳಾದ ಮೇಲೆ ಪೂಜೆಸರಿಯಾಗಿ ನಡೆಯಿತಂತೆ. ಈ ಕಾರಣಗಳಿಂದ ಸುತ್ತಮುತ್ತಲಿನ ಗ್ರಾಮಸ್ಥರು ಈದೇವರಲ್ಲಿ ಭಕ್ತಿಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

ಆಗಿನ ಕಾಲದಲ್ಲಿ ಬಿಕ್ಕಳಿಯಿಂದ ದೇವಸ್ಥಾನಕ್ಕೆ ಬರಲು ಕಾಲುದಾರಿಯಿತ್ತು. ದೇವಸ್ಥಾನದ ಕಟ್ಟಡವು ಬಹಳೆಯದಾಗಿ ಜೀರ್ಣ ಸ್ಥಿತಿಯಲ್ಲಿತ್ತು. ದೇವಾಲಯದಲ್ಲಿ ಉದ್ಭವ ಲಿಂಗವನ್ನು ಬಿಟ್ಟರೆ ಬೇರೇನೂ ಇರಲಿಲ್ಲ. ಬೇರೋಂದು ಗ್ರಮದಿಂದ ಅರ್ಚಕರೊಬ್ಬರು ಪ್ರತಿದಿನ ಬಂದು ಪೂಜೆಮಾಡಿ ಹೋಗುತ್ತಿದ್ದರು.

1920ರ ಸುಮಾರಿಗೆ ಶಿವಮೊಗ್ಗದಿಂದ ಸೀತಾರಾಮ ಅಯ್ಯರ ಬಿಕ್ಕಳಿಯಲ್ಲಿರುವ ತೋಟ, ಗದ್ದೆಗಳನ್ನು ಖರೀದಿಸಿ ವ್ಯವಸಾಯ ಮಾಡಲು ಇಲ್ಲಿ ಬಂದು ನೆಲಸಿದರು. ಕಾಲಾಂತರದಲ್ಲಿ ದೇವಸ್ಥಾನಕ್ಕೆ ಸರಿಯಾದ ರಸ್ತೆಯನ್ನು ಮಾಡಿಸಿದರು. ನಿತ್ಯ ಪೂಜೆಗಾಗಿ ಒಬ್ಬ ಅರ್ಚಕರನ್ನು ನೇಮಿಸಿ ಅವರಿಗೆ ಬಿಕ್ಕಳಿಯಲ್ಲಿ ಮನೆಮಾಡಿ ಕೊಟ್ಟು ದೇವಾಲಯದ ಹಳೆಯ ಕಟ್ಟಡವನ್ನು ಕೆಡವಿ ಸುಭದ್ರವಾದ ಕಟ್ಟಡವನ್ನು ನಿರ್ಮಾಣ ಮಾಡಲು ಯೋಜಿಸಿದರು. ಅಲ್ಲಿ ಲಿಂಗವೊಂದೇ ಇದ್ದದ್ದರಿಂದ ದೇವಾಲಯದಲ್ಲಿ ಪಾರ್ವತಿ, ಗಣೇಶ, ನಂದಿ ವಿಗ್ರಹಗಳನ್ನೂ ಸ್ಥಾಪಿಸಲು ಯೋಚಿಸಿದರು. ಇದಕ್ಕಾಗಿ ಅವರು ಶೃಂಗೇರಿಯಲ್ಲಿದ್ದ ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳ ದರ್ಶನ ಮಾಡಿ ತಮ್ಮ ಇಚ್ಛೆಯನ್ನು ಶ್ರೀಗುರುಗಳವರಲ್ಲಿ ಬಿನ್ನವಿಸಿ ಅವರ ಅನುಗ್ರಹವನ್ನು ಪ್ರಾರ್ಥಿಸಿದರು.

ಇದನ್ನು ಕೇಳಿ ಶ್ರೀ ಶ್ರೀ ಗುರುಗಳವರು ಈರೀತಿ ಅಪ್ಪಣೆ ಕೊಡಿಸಿದರು "ಒಳ್ಳಯದು ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಬಹಳ ಒಳ್ಳೆಯದು. ನೀನು ಇರುವ ಸ್ಥಳವು ಶಕ್ತಿಕ್ಷೇತ್ರ. ಆದ್ದರಿಂದ ಶಕ್ತಿ ಸ್ವರೂಪಿಣಿಯಾದ ದುರ್ಗಾ ದೇವಿಯು ಇರಬೇಕು. ಅದು ಸುಬ್ರಹ್ಮಣ್ಯ ಕ್ಷೇತ್ರವೂ ಆಗಿರುವುದರಿಂದ ಅಲ್ಲಿ ಸುಬ್ರಹ್ಮಣ್ಯನನ್ನೂ ಪ್ರತಿಷ್ಠಿಸಬೇಕು. ಈ ದೇವರುಗಳಗೆ ವರದ ದುರ್ಗ, ಬಾಲ ಗಣಪತಿ, ಬಾಲಸುಬ್ರಹ್ಮಣ್ಯ ಎಂದು ಹೆಸರುಗಳನ್ನು ಇಡ ಬೇಕು. ಅಮ್ಮನವರ ವಿಗ್ರಹದ ಅಡಿಯಲ್ಲಿಡಬೇಕಾದ ಶ್ರೀ ಚಕ್ರವನ್ನು ನಾನು ಪೂಜೆಮಾಡಿ ಕೊಡಿತ್ತೇನೆ".

ಈ ರೀತಿಯಾಗಿ ಶ್ರೀ ಗುರುಗಳವರಿಂದ ಪರಮಾನುಗ್ರಹವಾದಮೇಲೆ ಸೀತಾರಾಮ ಅಯ್ಯರ್‌ರವರಿಗೆ ಬಹಳ ಸಂತೋಷವಾಯಿತು. ದೇವಾಲಯದ ಹಳೆಯ ಕಟ್ಟಡವನ್ನು ನೆಲಸಮ ಮಾಡಿ ಕಲ್ಲಿನಲ್ಲಿ ಕಟ್ಟಡದ ನಿರ್ಮಾಣ ಪ್ರಾರಂಭವಾಯಿತು. ಲಿಂಗಕ್ಕೆ ಬಳಪದಕಲ್ಲಿನಿಂದ ಮಾಡಿದ ಪಾಣಿಪೀಠವನ್ನು ಜೋಡಿಸಲಾಗಿತ್ತು. ಆ ಜಾಗದಲ್ಲೆಲ್ಲಾ ತುಂಬಾಕಸ ಸೇರಿಕೊಂಡಿದ್ದರಿಂದ ಪಾಣಿಪೀಠವನ್ನು ತೆಗೆದು ಹಾಕಿ ಶುದಿ ್ಧಮಾಡಲಾಯಿತು. ನೆಲಮಟ್ಟದಿಂದ ಸುಮಾರು 8-9 ಅಡಿಗಳವರೆಗೆ ನೆಲವನ್ನು ಅಗೆಯಲಾಗಿತ್ತು. ಲಿಂಗವೂ ಇನ್ನೂ ಕೆಳಗಿನಿಂದ ಬಂದಿತ್ತು.

ಸೀತಾರಾಮ ಅಯ್ಯರ್‌ರವರು ಕನ್ನಡ ಜಿಲ್ಲೆಯ ಕಾರ್ಕಳದಲ್ಲಿದ್ದ ಶಿಲ್ಪಿ ರಂಜಾಳ ಗೋಪಾಲ ಜನಾರ್ದನ ಶಣೈರವರನ್ನುಕಂಡು ವಿಗ್ರಹಗಳನ್ನು ಮಾಡಿ ಕೊಡುವಂತೆ ಹೇಳಿದರು. ಸುಮಾರು 4-5 ತಿಂಗಳನಂತರ ಅಲ್ಲಿಗೆ ಹೋಗಿ, ಉದ್ಭವ ಲಿಂಗಕ್ಕೆ 3 ಪಾಣಿಪೀಠದ ಕಲ್ಲುಗಳು, ಬಾಲಗಣ ಪತಿ, ಬಾಲ ಸುಬ್ರಹ್ಮಣ್ಯ, ವರದ ದುರ್ಗಾಂಬಾ, ನಂದಿಕೇಶ್ವರ, ಈ ಎಲ್ಲಾ ವಿಗ್ರಹಗಳನ್ನೂ ತರಲಾಯಿತು.

ಕಟ್ಟಡದ ಅಡಿಪಾಯದ ಕೆಲಸ ಮುಗಿದು, ಗರ್ಭ ಗೃಹಗಳ ಕೆಲಸ ಮುಗಿದಿತ್ತು. ಮಳೆಗಾಲವು ಪ್ರಾರಂಭವಾಗುವುದರಿಂದ ಫಾಲ್ಗುಣ ಮಾಸದಲ್ಲಿ ದೇವತಾ ಪ್ರತಿಷ್ಠಾಪನೆಗೆ ಮುಹೂರ್ತವನ್ನು ನಿಶ್ಚಯಿಸಲಾಯಿತು. ಸೀತಾರಾಮ ಅಯ್ಯರ್‌ರವರು ಶ್ರಿಂಗೇರಿಗೆ ಹೋಗಿ ಶ್ರೀ ಶ್ರೀ ಗುರುಗಳವರಿಂದ ಶ್ರೀ ಚಕ್ರವನ್ನು ಅನುಗ್ರಹ ಪೂರ್ವಕವಾಗಿ ತೆಗೆದುಕೊಂಡು ಬಂದರು. 1952ರ ಫಾಲ್ಗುಣ ಮಾಸದಲ್ಲಿ ದೇವತಾ ಪ್ರತಿಷ್ಠಾಪನ

ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರಿದುವು. ಒಂದು ವಾರ ನಡೆದ ಕಾರ್ಯಕ್ರಮಗಳಲ್ಲಿ ಗ್ರಮಸ್ಥರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ದೇವತಾ ಪ್ರಸಾದವನ್ನು ಸ್ವೀಕರಿಸಿ ಸಂತೋಷ ಪಟ್ಟರು.

ದೇವಸ್ಥಾನದ ಎದುರಿನಲ್ಲಿ ಒಂದು ಆಲದ ಮರವಿತ್ತು. ತುಂಬಾ ವಿಶಾಲವಾಗಿ ಬೆಳೆದಿತ್ತು. ಅದರಲ್ಲಿ ಒಂದು ಬ್ರಹ್ಮರಾಕ್ಷಸವು ವಾಸವಾಗಿರುವುದಾಗಿ ಎಲ್ಲರೂ ಹೇಳುತ್ತಿದ್ದರು. ಸೀತಾರಾಮ ಅಯ್ಯರ್‌ರವರು ಇದರ ಬಗ್ಗೆ ಪ್ರಶ್ನೆಕೇಳಿದಾಗ ಈ ಮರವು ಚನ್ನಾಗಿ ಬೇಳೆಯುತ್ತಿದ್ದಂತೆ ದೇವಾಲಯವು ಹೀನ ಸ್ಥಿತಿಯಲ್ಲಿರುವುದೆಂದೂ, ದೇವಾಲಯವು ಉದ್ಧಾರವಾದಾಗ ಈ ಮರವು ತಾನಾಗಿಯೇ ನಾಶವಾಗುವುದೆಂದು ಹೇಳಿದರು. ಅದರಂತೆಯೇ ದೇವಾಲಯದ ಜೇರ್ಣೋದ್ಧಾರವು ಪೂರ್ತಿಯಾಗಿ ದೇವತಾ ಪ್ರತಿಷ್ಠಾನದ ನಂತರ ಆ ಮರವು ತಾನಾಗಿಯೇ ನಾಶವಾಯಿತು.

ಗ್ರಮಾಸ್ಥರೆಲ್ಲರೂ ಸೇರಿ ಸಮಿತಿಯನ್ನು ರಚಿಸಿ ದೇವಾಲಯದ ಕಟ್ಟಡವನ್ನು ಪೂರ್ಣಗೊಳಿಸಿದರು. ಕೆಲ ವರ್ಷಗಳ ನಂತರ ಹರಿಹರಪುರದ ಶ್ರೀ ಶ್ರೀ ಗುರುಗಳ ಅಮೃತ ಹಸ್ತದಿಂದ ದೇವಾಲಯದ ಕುಂಭಾಭಿಷೇಕವನ್ನೂ ನೆರವೇರಿಸಿರುತ್ತಾರೆ. ಇಲ್ಲಿ ಪ್ರತಿ ವರ್ಷ ಫಾಲ್ಗುಣ ಮಾಸದಲ್ಲಿ ಶ್ರೀ ರುದ್ರಹೋಮ, ಶ್ರೀ ಚಂಡೀಹೋಮ, ಶ್ರೀ ಹಣಪತಿ ಹೋಮ ಮತ್ತು ಶ್ರೀ ಸುಬ್ರಹ್ಮಣ್ಯ ಹೋಮ ಕಾರ್ಯಕ್ರಮಗಳೂ ಕಾರ್ತಿಕ ಮಾಸದಲ್ಲಿ ದೀಪೋತ್ಸವಗಳೂ ನಡೆಯುತ್ತವೆ. ಗ್ರಾಮಸ್ಥರೆಲ್ಲಿರೂ ಶ್ರದ್ಧಾ ಭಕ್ತಿಗಳಿಂದ ದೇವರ ಸೇವೆ ಮಾಡುತ್ತಾರೆ. ಪ್ರತಿ ಸೋಮವಾರ ಗ್ರಾಮಸ್ಥರು ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ ನಡೆಸುತ್ತಾರೆ.

ಶ್ರೀ ಭವಾನಿ ಶಂಕರ ಸ್ವಾಮಿಯು ಎಲ್ಲರಿಗೂ ಮಂಗಳವನ್ನುಂಟು ಮಾಡಲಿ.